


ಇಲ್ಲಿ ವಿಶೇಷ. ಹೀಗಾಗಿ ತನ್ನ ಬಿಡುಗಡೆ ಮತ್ತು ಸಮುದಾಯದ ಬಿಡುಗಡೆ ಎರಡನ್ನೂ ಜೊತೆಗೇ ಇಟ್ಟು ನೋಡಬೇಕಾಗುತ್ತದೆ. ಇಲ್ಲಿ ಸಮುದಾಯ ಎಂಬ ಪದವನ್ನು ನಾನು ಸೀಮಿತ ಮತ್ತು ವಿಶಾಲ ಎರಡೂ ಅರ್ಥದಲ್ಲಿ ಬಳಸುತ್ತಿದ್ದೇನೆ. ಹೀಗಾಗಿ ಬಾನು ಮುಷ್ತಾಕ್ ಅವರ ಬದುಕು ಮತ್ತು ಬರಹ ಎರಡನ್ನೂ ಒಂದು ವಿಸ್ತೃತವಾದ ಕಾಲದ ಸಾಮಾಜಿಕ ಆಗುಹೋಗುಗಳ ಜೊತೆಗಿಟ್ಟು ನೋಡಬೇಕಾಗುತ್ತದೆ.

ಬರೆಯಬೇಕೆಂದುಕೊಂಡಾಗ ಏನನ್ನು ಬರೆಯುವುದು, ಹೇಗೆ ಬರೆಯುವುದು ಎಂಬ ಪ್ರಶ್ನೆ ಎದುರಾದಾಗ ಬಾನು ಮುಷ್ತಾಕ್ ತಮ್ಮ ಕಣ್ಣೆದುರಿಗಿರುವ ತಮಗೆ ಹತ್ತಿರವಾದ ಸಂಗತಿಗಳನ್ನು ಬರಹಕ್ಕಿಳಿಸಿದರು. ಅವರ ಬರಹಗಳು ಲಂಕೇಶ್ ಪತ್ರಿಕೆಯ ಮೂಲಕ ಎಲ್ಲರನ್ನೂ ತಲುಪಿದ್ದೂ ಹೌದು. ಆದರೆ ಬರೆಯುವುದು, ದನಿಯೆತ್ತಿ ಮಾತನಾಡುವುದು ಆ ಸಂದರ್ಭದಲ್ಲಿ ಮತ್ತು ಈ ಸಂದರ್ಭದಲ್ಲೂ ಹೆಮ್ಮೆಯ ಸಂಗತಿಯಾಗಲಿಲ್ಲ. ಇದಕ್ಕಾಗಿ ಅವರು ಎದುರಿಸಿದ್ದು, ಕಳೆದುಕೊಂಡದ್ದು ಅಪಾರ. ಮಸೀದಿಯಲ್ಲಿ ಹೆಣ್ಣುಮಕ್ಕಳಿಗೆ ಪ್ರಾರ್ಥನೆ ಮಾಡಲು ಅವಕಾಶವಿರಬೇಕು ಎಂದಾಗ ಧಾರ್ಮಿಕ